# ಆಹಾ ಸುದ್ದಿ!

★ ಸಸಿತೋಟ





ಇದು ಲಾರೆನ್ಸ್ ಆಫ್ ಅಬ್ದೌನ್. ಜೋರ್ಡಾನಿನಲ್ಲಿರುವ ಬ್ರಿಟನ್ ರಾಯಭಾರ ಕಚೇರಿಯ ಪ್ರಥಮ ಡಿಪ್ಲೊ– ಕ್ಯಾಟ್. ಅಂದರೆ ರಾಜ–ಬೆಕ್ಕು. ಕೆಲಸ– ರಾಯಭಾರ ಕಚೇರಿಯಲ್ಲಿರುವ ಇಲಿಗಳನ್ನು ಹಿಡಿಯುವುದು, ಜೊತೆಗೆ ತನ್ನ ಟ್ವಿಟರ್ ಖಾತೆಗೆ ಹಾಕಲು ಫೋಟೋಗೆ ಪೋಸ್ ಕೊಡುವುದು. ಸದ್ಯ ಕಚೇರಿಯಲ್ಲಿರುವ ಎರಡು ಕಾಲಿನ ಹೆಗ್ಗಣಗಳನ್ನು ಹಿಡಿಯುವ ಕೆಲಸಕ್ಕೆ ಇನ್ನೂ ಕೈ ಹಾಕಿಲ್ಲವಂತೆ.

ಒಡಿಶಾದ ಮನೋಜ್‌ಕುಮಾರ್ ಮಹಾರಾಣ ಬಾಯಿಯಲ್ಲಿ ಒಟ್ಟು 459 ಹೀರುಗೊಳವೆಗಳನ್ನು ಕಚ್ಚಿ ಹಿಡಿದುಕೊಂಡು ಗಿನ್ನೆಸ್ ದಾಖಲೆ ಮಾಡಿದ್ದಾನಂತೆ. ಹಣ್ಣಿನ ರಸ, ಎಳನೀರು ಹೀರುವಾಗ ರಸಸ್ವಾದ ಮಾಡುವ ಬದಲು ತಾವೂ ದಾಖಲೆ ಬಗ್ಗೆ ಆಲೋಚಿಸಿದ್ದರೆ.. ಎಂದು ಹಲವರು ಟ್ವಿಟರ್‌ನಲ್ಲಿ ಅಲವತ್ತುಕೊಂಡಿದ್ದಾರಂತೆ.



ಇಂದೋರ್‌ನ ಕಂಪ್ಯೂಟರ್ ಎಂಜಿನಿಯರ್ ಸುಯಶ್ ದೀಕ್ಷಿತ್ ಈಜಿಪ್ಟ್– ಸುಡಾನ್ ಗಡಿಯಲ್ಲಿ ಬಿರ್ ತಾವಿಲ್ ಎಂಬ ಜಾಗ ತನಗೆ ಸೇರಿದ್ದು, ಅಲ್ಲಿಗೆ ತಾನು ಹೇಗೆಲ್ಲ ಕಷ್ಟಪಟ್ಟು ಪ್ರಯಾಣ ಮಾಡಿದೆ ಎಂದು ಟ್ವಿಟರ್‌ನಲ್ಲಿ ಹಾಕಿಕೊಂಡು ಬೀಗಿದನಂತೆ. ಈ ಸಂತಸದ ಆಯಸ್ಸು ಕೆಲವೇ ದಿನಗಳು. ಅಮೆರಿಕದ ಜೆರೆಮಿಯ ಎಂಬಾತ ತಾನು ಮೂರು ವರ್ಷಗಳ ಹಿಂದೆ ಅಲ್ಲಿ ಹೋಗಿದ್ದ ಬಗ್ಗೆ ದಾಖಲೆಗಳನ್ನು ಟ್ವಿಟರ್‌ನಲ್ಲಿ ಹಾಕಿದನಂತೆ. ಈಗ ಈ ಭಾರತೀಯನಿಂದಾಗಿ ಕಂಪ್ಯೂಟರ್‌ನಲ್ಲಿ ಪ್ರಯಾಣ ಮಾಡಿದಂತೆ ಎಂಬ ಹೊಸ ಗಾದೆ ಹುಟ್ಟಿಕೊಂಡಿದೆಯಂತೆ.

ಈಜಿಪ್ಟ್‌ನಲ್ಲಿ ವರನೊಬ್ಬ ತನ್ನ 'ಬ್ಯಾಚಲರ್' ಪಾರ್ಟಿಯಲ್ಲಿ ಕುಣಿಯುತ್ತಿದ್ದಾಗ ಕುಶಾಲತೋಪಿನ ಗುಂಡು ಮರ್ಮಾಂಗಕ್ಕೆ ತಾಗಿ ಶಾಶ್ವತವಾಗಿ ಬ್ಯಾಚಲರ್ ಪಟ್ಟ ಗಿಟ್ಟಿಸಿಕೊಂಡನಂತೆ. ಅಲ್ಲಿ ಇಂತಹ ಘಟನೆಗಳು ಹಿಂದೆಯೂ ಸಾಕಷ್ಟು ಸಂಭವಿಸಿದ್ದು, ಪಾರ್ಟಿಯ ರಂಗು ಏರಿದಂತೆ ಗನ್ ಮೇಲಕ್ಕೆ ಉಡಾಯಿಸುವ ಬದಲು ಅಡ್ಡಕ್ಕೆ ಹಾರಿಸುವುದು ಮಾಮೂಲಂತೆ. ಸಂತಸ ವ್ಯಕ್ತಪಡಿಸುವಾಗಲೇ ಹೀಗಾದರೆ, ಇನ್ನು ಸಿಟ್ಟು ಬಂದಾಗ ಹೇಗಿರಬಹುದು!




ಇತ್ತೀಚೆಗೆ ನಡೆದ ವಿಶ್ವಸುಂದರಿ ಸ್ಪರ್ಧೆಯಲ್ಲಿ ಮ್ಯಾನ್ಮಾರ್ ಸುಂದರಿ ಧರಿಸಿದ ದಿರಿಸು. ಇದು ಉಡುಪೋ ಅಥವಾ ಉಡುಗೊರೆ ಸಂಗ್ರಹಿಸುವ ಬುಟ್ಟಿಯೋ ಎಂದು ತೀರ್ಪುಗಾರರು ಗೊಂದಲ ಮಾಡಿಕೊಂಡಿರಬಹುದು.



ಜಪಾನಿನ ನಗರ ಪಾಲಿಕೆಯ ಸದಸ್ಯೆ ಯುಕಾ ಒಗಾಟಾ ತನ್ನ ಏಳು ತಿಂಗಳ ಮಗುವನ್ನು ಎತ್ತಿಕೊಂಡೇ ಸಭೆಗೆ ಹಾಜರಾಗಿದ್ದಳಂತೆ. ಇಲ್ಲಿಯ ಪಾಲಿಕೆ, ಪಂಚಾಯತ್ ಸಭೆಗೆ ಗಂಡನನ್ನೂ ಎಳೆದುಕೊಂಡು ಬರುವ ಸದಸ್ಯೆಯರಿರುವಾಗ ಇದೇನು ಮಹಾ.